# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಪ್ರತಾಪಚಂದ್ರ ಶೆಟ್ಟಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 929

ಉತ್ತರಿಸಬೇಕಾದ ದಿನಾಂಕ : 21.12.2021

ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ಕೃಷಿ ಸಾಲ ಮನ್ನಾ 2018ರ ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ ಎಷ್ಟು; ಇದರ ಪ್ರಯೋಜನವನ್ನು ಪಡೆದ ರೈತರ ಸಂಖ್ಯೆ ಎಷ್ಟು; ಪ್ರಯೋಜನ ಪಡೆಯದ ರೈತರ ಸಂಖ್ಯೆ ಎಷ್ಟು; (ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು) | ಸಹಕಾರ ಸಂಘಗಳ ಸಾಲ ಮನ್ನಾ ಯೋಜನೆ –2018 ರಡಿಯಲ್ಲಿ ಉಡುಪಿ ಜಿಲ್ಲೆಯಲ್ಲಿ ಒಟ್ಟು 23,871 ರೈತರು ಸಾಲ ಮನ್ನಾ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಈ ಪೈಕಿ 1,809 ರೈತರು ಯೋಜನೆಗೆ ಅರ್ಹವಿಲ್ಲವೆಂದು ಸಂಬಂಧಿಸಿದ ಸಹಕಾರ ಸಂಘಗಳು ತಿರಸ್ಕರಿಸಿರುತ್ತವೆ.<br><br>ಈ ಯೋಜನೆಯಲ್ಲಿ ಈವರೆಗೆ 21,749 ರೈತರನ್ನು ಅರ್ಹರೆಂದು ಗುರುತಿಸಿದ್ದು, 21,113 ರೈತರ ಉಳಿತಾಯ ಖಾತೆಗಳಿಗೆ ಸಾಲ ಮನ್ನಾ ಮೊತ್ತ ಬಿಡುಗಡೆ ಮಾಡಲಾಗಿದೆ. ಇನ್ನೂ 313 ರೈತರ ಅರ್ಹತೆಯನ್ನು ಗುರುತಿಸಲು ಬಾಕಿ ಇರುತ್ತದೆ. ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿರುತ್ತದೆ. |

| ಕ್ರಸಂ | | ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ | ಸಹಕಾರ ಸಂಘಗಳು ತಿರಸ್ಕರಿಸಿರುವ ಅರ್ಜಿಗಳು | ಅರ್ಹತೆ ಗುರುಸಿರುವ ರೈತರ ಸಂಖ್ಯೆ | ಕಲಂ 5 ರ ಪೈಕಿ ಅನುದಾನ ಬಿಡುಗಡೆ ಮಾಡಲಾದ ರೈತರ ಸಂಖ್ಯೆ | ಅರ್ಹತೆ ಗುರುತಿಸಲು ಬಾಕಿ ಇರುವ ರೈತರ ಸಂಖ್ಯೆ |
|---|---|---|---|---|---|---|
| 1 | 2 | 3 | 4 | 5 | 6 | 8 |
| 1 | ಕಾರ್ಕಳ | 1910 | 148 | 1740 | 1689 | 22 |
| 2 | ಹೆಬ್ರಿ | 2865 | 214 | 2610 | 2534 | 41 |
| 3 | ಕುಂದಾಪುರ | 4774 | 355 | 4350 | 4223 | 69 |
| 4 | ಬೈಂದೂರು | 6684 | 513 | 6090 | 5911 | 81 |
| 5 | ಕಾಪು | 2148 | 157 | 1957 | 1900 | 34 |
| 6 | ಬ್ರಹ್ಮಾವರ | 4297 | 332 | 3915 | 3800 | 50 |
| 7 | ಉಡುಪಿ | 1193 | 90 | 1087 | 1056 | 16 |
| | ಒಟ್ಟು | **23,871** | **1,809** | **21,749** | **21,113** | **313** |

| | | |
|---|---|---|
| ಆ) | ಉಡುಪಿ ಜಿಲ್ಲೆಯಲ್ಲಿ ಕೆಲವರಿಗೆ ಸಾಲಮನ್ನಾ ಮಾಡಿ ಕೆಲವರಿಗೆ ಸಾಲ ಮನ್ನಾ ಮಾಡದಿರಲು ಕಾರಣಗಳೇನು; ವರ್ಷಗಳಿಂದ ಈ ಅರ್ಜಿಗಳ ಕುರಿತು ಪರಿಹಾರ ಕ್ರಮವಹಿಸದೇ ಬಾಕಿಯಾಗಿಯೇ ಇರಿಸಲು ಕಾರಣಗಳೇನು ಯಾವ ಕಾಲಮಿತಿಯಲ್ಲಿ ಈ ಅರ್ಜಿ ಕುರಿತು ಕ್ರಮವಹಿಸಲಾಗುವುದು. ಇಲಾಖೆಯ ಕಾಲಮಿತಿ ಯಾವುವು; | ಉಡುಪಿ ಜಿಲ್ಲೆಯಲ್ಲಿ ಸಾಲ ಮನ್ನಾ ಯೋಜನೆಯಲ್ಲಿ ಅರ್ಹತೆ ಗುರುತಿಸಲು ಬಾಕಿ ಇರಲು ಕಾರಣಗಳು ಈ ಕೆಳಗಿನಂತಿರುತ್ತವೆ, |

| ಕ್ರ. ಸಂ | ಸಾಲ ಮನ್ನಾಅರ್ಹತೆ ಗುರುತಿಸದೇ ಇರಲು ಕಾರಣಗಳು | | ಪ್ರಕರಣಗಳ ಸಂಖ್ಯೆ |
|---|---|---|---|
| 1 | ಕಲಂ 52 ಲಾಗಿನ್‌ನ ರೈತರ ಸಾಲದ ಮಾಹಿತಿ | Due date ತಪ್ಪಾಗಿ ಅಳವಡಿಸಿರುವುದು | 15 |
| 2 | | Fraud/type of loan | 41 |
| 3 | | Outstanding '0' ಎಂದು ನಮೂದಿಸಿರುವುದು. | 15 |
| 4 | | ಸುಸ್ತಿ ಸಾಲಗಳಿಗೆ ಬಡ್ಡಿ ಪಾವತಿಯನ್ನು ಸರ್ಕಾರದ ಆದೇಶದ ನಿಗದಿತ ದಿನಾಂಕಕ್ಕೆ ತಾಳೆಯಾಗದೇ ಇರುವುದು | 30 |
| 5 | ಸ್ವಯಂ ದೃಢೀಕರಣ ಲಾಗಿನ್‌ನಲ್ಲಿನ ರೈತರ ಮಾಹಿತಿಗಳು | ಒಂದು ಕುಟುಂಬಕ್ಕೆ ರೂ.1.00 ಲಕ್ಷಗಳ ಸಾಲ ಮನ್ನಾ ಮೀರಿದ್ದು, ಅಂತಹ ಖಾತೆಗಳನ್ನು ಸಹಕಾರ ಸಂಘಗಳ ರಿಜೆಕ್ಟ್ ಮಾಡದೇ ಇರುವ ಪ್ರಕರಣಗಳು | 11 |
| 6 | | | |
| 7 | | ರೈತರ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಆರ್‌ಟಿಸಿ ಸಂಬಂಧಿಸಿದ ಇಲಾಖೆಯ ದತ್ತಾಂಶದೊಂದಿಗೆ ತಾಳೆಯಾಗದೇ ಇರುವುದು | 29 |
| 8 | | ರೈತರು ನೀಡಿದ ಪಡಿತರ ಚೀಟಿಗಳು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಿಂದ ಸರಿ ಇರುವ ಬಗ್ಗೆ ದೃಢೀಕರಣ ನೀಡದೇ ಇರುವುದು | 33 |
| 9 | | ತಾಲ್ಲೂಕು ಸಮಿತಿಯಲ್ಲಿ ಕಲಂ 52 ಲಾಗಿನ್‌ನಲ್ಲಿ ಮತ್ತು ಸ್ವಯಂ ದೃಢೀಕರಣದ ಲಾಗಿನ್‌ನಲ್ಲಿನ ಹೆಸರು ತಾಳೆ ಆಗದೇ ಇದ್ದು, ಅಥವಾ ಪಡಿತರ ಚೀಟಿಯಲ್ಲಿ ಒಬ್ಬನೇ ಸದಸ್ಯನಿದ್ದು, ಅಂತಹ ಪ್ರಕರಣಗಳನ್ನು ತಾಲ್ಲೂಕು ಮಟ್ಟದ ಸಮಿತಿಯ ಲಾಗಿನ್‌ನಲ್ಲಿ ಅಧಿಕಾರಿಗಳು ರಿಜೆಕ್ಟ್ ಮಾಡಿರುವ ಪ್ರಕರಣಗಳು | 42 |
| 10 | | ಸ್ವಯಂ ದೃಢೀಕರಣದ ಲಾಗಿನ್‌ನಲ್ಲಿ ರೈತನು ಆದಾಯ ತೆರಿಗೆದಾರ/ವೇತನದಾರ/ ಪಿಂಚಣಿದಾರಎಂದು ದೃಢೀಕರಿಸಿರುವ ಪ್ರಕರಣಗಳು | 25 |
| 11 | | ಇತರೇ ಕಾರಣಗಳು | 72 |
| | | ಒಟ್ಟು | **313** |

| | | |
|---|---|---|
| | | ಸಹಕಾರ ಸಂಘಗಳು ರೈತರ ಸಾಲದ ಮಾಹಿತಿ ಮತ್ತು ವೈಯಕ್ತಿಕ ದಾಖಲೆಗಳ ಮಾಹಿತಿಯನ್ನು ಸಾಲ ಮನ್ನಾ ತಂತ್ರಾಂಶದಲ್ಲಿ ತಪ್ಪಾಗಿ ಅಳವಡಿಸಿರುವುದರಿಂದ ಮತ್ತು ರೈತರು ನೀಡಿದ ಆಧಾರ್ ಕಾರ್ಡ್, ಪಡಿತರ ಚೀಟಿ ಮತ್ತು ಪಹಣಿ ದಾಖಲೆಗಳು ಸಂಬಂಧಿಸಿದ ಇಲಾಖೆಯ ದತ್ತಾಂಶಕ್ಕೆ ತಾಳೆಯಾಗದೇ ಇರುವುದರಿಂದ ಇದುವರೆಗೆ ಅರ್ಹತೆ ಗುರತಿಸಲು ಬಾಕಿ ಇರುತ್ತದೆ.<br><br>ಸಾಲ ಮನ್ನಾ ತಂತ್ರಾಂಶದಲ್ಲಿ ತಪ್ಪಾಗಿರುವ ಮಾಹಿತಿಯನ್ನು ಸರಿಪಡಿಸಲು ಸಂಬಂಧಿಸಿದ ಸಹಕಾರ ಸಂಘಗಳಿಗೆ ರೈತವಾರು ಮಾಹಿತಿಯನ್ನು ನೀಡಿದ್ದು, ಸಹಕಾರ ಸಂಘಗಳು ಸರಿಯಾಗಿ ಮಾಹಿತಿ ಅಳವಡಿಸಿದ ಕೂಡಲೇ ಬಾಕಿ ಇರುವ ರೈತರ ಸಾಲ ಮನ್ನಾ ಅರ್ಹತೆ ಗುರುತಿಸಲಾಗುವುದು. |
| ಇ) | ಅರ್ಹತೆಯನ್ನು ಗುರುತಿಸಲು ಬಾಕಿ ಇರುವ ಪ್ರಕರಣಗಳ ಪೈಕಿ ಕಲಂ 52ರ ತಂತ್ರಾಂಶದ ಡಿಇಒ ಲಾಗಿನ್‌ನಲ್ಲಿ ತಿದ್ದುಪಡಿಗೆ ಅವಕಾಶ ಕಲ್ಪಿಸದಿರಲು ಕಾರಣಗಳೇನು; ಸ್ವಯಂ ದೃಢೀಕರಣ ಲಾಗಿನ್‌ನಲ್ಲಿ ತಿದ್ದುಪಡಿಗೆ ಅವಕಾಶ ಕಲ್ಪಿಸದಿರಲು ಕಾರಣವೇನು; ರೈತರಿಗೆ ಸಾಲ ಮನ್ನಾಕ್ಕಾಗಿ ಸತಾಯಿಸದೇ ಶೀಘ್ರ ಅರ್ಜಿ ವಿಲೇವಾರಿಗೆ ಹಾಗೂ ಎಲ್ಲರಿಗೂ ಸಾಲ ಮನ್ನಾ ಪ್ರಯೋಜನವನ್ನು ದೊರಕಿಸಲು ಸರ್ಕಾರದ ಕ್ರಮಗಳೇನು? | ತಾಲ್ಲೂಕು ಸಮಿತಿಯಲ್ಲಿ ಪರಿಶೀಲಿಸಿರುವ ಅರ್ಜಿಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸ್ವಯಂ ದೃಢೀಕರಣದ ಅರ್ಜಿಗಳನ್ನು ತಿದ್ದುಪಡಿ ಮಾಡಲು ಈಗಾಗಲೇ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿ ಇದರ ಆಧಾರದ ಮೇಲೆ 30ನೇ ಹಸಿರು ಪಟ್ಟಿ ತಯಾರಿಸಿ ಉಡುಪಿ ಜಿಲ್ಲೆಯ 232 ರೈತರಿಗೆ ಸಾಲ ಮನ್ನಾ ಅರ್ಹತೆ ಗುರುತಿಸಲಾಗಿದೆ.<br><br>ಕಲಂ 52 ರಲ್ಲಿ ತಪ್ಪಾಗಿ ಅಳವಡಿಸಿರುವ ಮಾಹಿತಿಯನ್ನು ಸಹಕಾರ ಸಂಘಗಳು ಸರಿಪಡಿಸಿಲು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಿದರೆ ಬಾಕಿ ಇರುವ ಎಲ್ಲಾ ರೈತರ ಮಾಹಿತಿಯನ್ನು ಸಹಕಾರ ಸಂಘಗಳು ತಿದ್ದುಪಡಿ ಮಾಡಿ ದುರುಪಯೋಗ ಪಡಿಸಿಕೊಳ್ಳಬಹುದಾದ ಸಾಧ್ಯತೆ ಇರುವುದರಿಂದ ಈ ಅಂಶವು ಆಯುಕ್ತರು ಭೂ–ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ–ದಾಖಲೆಗಳ ಇಲಾಖೆಯವರಿಂದ ಪರಿಶೀಲನೆಯಲ್ಲಿರುತ್ತದೆ.<br><br>ಅರ್ಹತೆ ಗುರುತಿಸಲು ಬಾಕಿ ಇರುವ ರೈತರಿಗೆ ಸಂಬಂಧಿಸಿದಂತೆ ಯಾವ ಕಾರಣಕ್ಕಾಗಿ ರೈತರ ಅರ್ಹತೆ ಗುರತಿಸಲಾಗಿಲ್ಲ ಎಂಬ ವಿವರವಾದ ರೈತರ ಪಟ್ಟಿಯನ್ನು ಸಂಬಂಧಿಸಿದ ಸಹಕಾರ ಸಂಘಗಳಿಗೆ ನೀಡಿ ಇವುಗಳನ್ನು ಸರಿಪಡಿಸಲು ಪ್ರಾಂತೀಯ ಹಂತದ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಸಂಬಂಧಿಸಿದ ಡಿಸಿಸಿ ಬ್ಯಾಂಕ್ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಗಿದೆ. |

**ಸಂಖ್ಯೆ: ಸಿಒ 381 ಸಿಎಲ್‌ಎಸ್ 2021**

(ಎಸ್.ಟಿ. ಸೋಮಶೇಖರ್)

ಸಹಕಾರ ಸಚಿವರು